ಊ) ಬಂದಿದ್ದರೆ. ಆದರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು). —

ಅ) ೧೯೮೭–೮೮ ರಿಂದ ೧೯೮೯–೯೦ನೇ ಸಾಲುಗಳಿಗೆ ೧೭೦೮ ಜನರನ್ನು ಗೌರವ ಮಧ್ಯಸ್ಥ ದಾರರನ್ನಾಗಿ ನೇಮಕಾತಿ ಮಾಡಲಾಗಿದೆ.

ಆ) ಈ ಮಾಹಿತಿ ಲಭ್ಯವಿಲ್ಲ.

ಇ) ೧) ಕಾನೂನು ಪದವೀಧರನಾಗಿದ್ದು ವಕೀಲ ವೃತ್ತಿಯಲ್ಲಿ ಮೂರು ವರ್ಷಗಳ ಅನುಭವ ಪಡೆದಿರಬೇಕು.

೨) ಸಹಕಾರ ಇಲಾಖೆಯ–ನಿವೃತ್ತ ಇಲಾಖಾ ಅಧಿಕಾರಿಗಳನ್ನು ಗೌರವ ಮಧ್ಯಸ್ಥದಾರರನ್ನಾಗಿ ನೇಮಕಾತಿ ಮಾಡಲಾಗುವುದು.

ಈ) ಗೌರವ ಮಧ್ಯಸ್ಥದಾರರ ವಿರುದ್ಧ ಲಂಚ ರುಷುವತ್ತುಗಳ ಬಗ್ಗೆ, ದೂರಾಚರಣೆಯ ಬಗ್ಗೆ ಆಪಾದನೆಗಳಿದ್ದಲ್ಲಿ ಅಥವಾ ಸಂಘಗಳಿಗೇ ಅವರೇ ಸದಸ್ಯದಾರರಾಗಿದ್ದಲ್ಲಿ ಅಥವಾ ವಹಿಸಿದ ವಿವಾದಗಳನ್ನು ನಿಗದಿತ ಸಮಯದಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಅಂಥವರ ಹೆಸರುಗಳನ್ನು ಅಸ್ತಿತ್ವದಲ್ಲಿರುವ ಪಟ್ಟಿಯಿಂದ ತೆಗೆದುಹಾಕಲು ಸಹಕಾರ ಸಂಘಗಳ ಉಪನಿಬಂಧಕರು ಶಿಫಾರಸ್ಸು ಮಾಡತಕ್ಕದ್ದು. ಆಗ್ಗೆ ಅವರು ಕೊಟ್ಟಿರುವ ಕಾರಣಗಳನ್ನು ಪರಿಶೀಲಿಸಿ ನೇಮಕ ಮಾಡಿದ ಪಟ್ಟಿಯಿಂದ ಅಂತಹ ಗೌರವ ಮಧ್ಯಸ್ಥದಾರರ ಹೆಸರನ್ನು ತೆಗೆದುಹಾಕಲಾಗುವುದು.

ಉ) ಬಂದಿದೆ.

ಊ) ಅಂತಹ ಗೌರವ ಮಧ್ಯಸ್ಥದಾರರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ.

## ಧಾರವಾಡ ಜಿಲ್ಲೆಯಲ್ಲಿರುವ ವಂಧ್ಯ ಮೂರಾಟ ಮಾಡುವ ಅಂಗಡಿಗಳು

೫೦೩೪. ಶ್ರೀ ಚಂದ್ರಕಾಂತಬೆಲ್ಲದ (ಧಾರವಾಡ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿರುವ ತಾಲ್ಲೂಕುವಾರು ಸೇಂದಿ ಸಾರಾಯಿ ಹಾಗೂ ಉಳಿದ ಮದ್ಯದ ಮೂರಾಟ ಮಾಡುವ ಅಂಗಡಿಗಳಿಗೆ ಸರ್ಕಾರ ಒಪ್ಪಿಗೆ ಕೊಟ್ಟಿದೆಯೆ. (ವಿವರ ನೀಡುವುದು),

ಆ) ಒಪ್ಪಿಗೆ ಹಡೆಯದೆ ಅನೇಕ ಸ್ಥಳಗಳಲ್ಲಿ ಮೂರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಇ) ಅನೇಕ ಶಾಲೆ ಕಾಲೇಜುಗಳ ಹತ್ತಿರ ದೇವಸ್ಥಾನಗಳ ಹತ್ತಿರ ಹಾಗೂ ಪವಿತ್ರ ಸಾರ್ವಜನಿಕ ಸ್ಥಳಗಳ ಹತ್ತಿರ ಮದ್ಯ ಮೂರಾಟ ಮಾಡುವ ಅಂಗಡಿಗಳಿಗೆ ಒಪ್ಪಿಗೆ ಕೊಟ್ಟ ಬಗ್ಗೆ ತಕರಾರುಗಳು ಬಂದಿದೆಯೇ.

ಈ) ಹಾಗಿದ್ದಲ್ಲಿ ತಕರಾರುಗಳ ಆಧಾರದ ಮೇಲೆ ರದ್ದು ಮಾಡಿದ ಮೂರಾಟ ಮಳಿಗೆಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು).

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಸಾರಾಯಿ ಮತ್ತು ಸೇಂದಿ ಅಂಗಡಿಗಳಿಗೆ ಸಂಬಂಧಿಸಿದಂತೆ ಸ್ಥಿರೀಕರಣ ಆದೇಶಗಳನ್ನು ಮಾತ್ರ ಸರ್ಕಾರದಿಂದ ನೀಡಲಾಗುತ್ತಿದ್ದು, ಸದರಿಯವುಗಳನ್ನು ಸೇರಿದಂತೆ ಎಲ್ಲಾ ಮದ್ಯದ ಅಂಗಡಿಗಳಿಗೆ ಪರವಾನಿಗೆಗಳನ್ನು ನಿಯಮಗಳ ಪ್ರಕಾರ ಸಂಬಂಧಪಟ್ಟ ಜಿಲ್ಲಾಧಿಕಾರಿ (ಆಬ್ಕಾರಿ)ಗಳಿಂದ ನೀಡಲಾಗುವುದು. (ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಇಲ್ಲ.

ಇ) ಸರ್ಕಾರಕ್ಕೆ ಅಂಥಹ ಆಕ್ಷೇಪಣೆಗಳು ಬಂದಿರುವುದಿಲ್ಲ, ಆದರೆ ಪರವಾನಿಗೆ ಮಂಜೂರು ಮಾಡುವ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ (ಆಬಕಾರಿ) ಬಂದಿರುತ್ತವೆ.

ಈ) ಯಾವುದೂ ಇಲ್ಲ.

## ANNEXURE

Stat ment showing the number of Toddy/Arrack Shops, Liquor Shops etc , licenced in Dharwar District for the year 1988–1989.

| Sl. No. | Taluk | Toddy Shops | Arrack Shops | C.L. 1 (Wholesale liquor licences) | CL. 2 (Retail Liquors shops | C.L.-9 (Bars) | C.L.-8 (Military Canteen | Beer Bars | Remark |
|---|---|---|---|---|---|---|---|---|---|
| 1 | Dharwad | 34 | 69 | 3 | 19 | 20 | 1 | 1 | |
| 2 | Navalgund | 12 | 30 | – | 7 | 3 | – | – | |
| 3 | Naragund | 10 | 17 | – | 8 | 5 | – | – | |
| 4 | Ron | 18 | 32 | – | 13 | 1 | – | – | |
| 5 | Gadag | 34 | 55 | 3 | 21 | – | – | – | |
| 6 | Mundargi | 25 | 26 | – | 3 | – | – | – | |
| 7 | Shribatti | 20 | 28 | – | 7 | – | – | – | |
| 8 | Kundagol | 15 | 25 | – | 7 | – | – | – | |
| 9 | Hubli | 34 | 75 | 19 | 67 | 28 | – | – | |
| 10 | Haveri | 39 | 35 | 1 | 16 | – | – | – | |
| 11 | Hunagund | 32 | 36 | – | 14 | – | – | – | |
| 12 | Shiggon | 28 | 36 | – | 7 | – | – | – | |
| 13 | Savanur | 26 | 28 | – | 5 | – | – | – | |
| 14 | Ranebennur | 25 | 42 | 3 | 16 | 14 | – | – | |
| 15 | Hirekerur | 20 | 32 | – | 11 | – | – | – | |
| 16 | Byadgi | 20 | 30 | – | 6 | 2 | – | – | |
| 17 | Kalghatti | – | 20 | – | 5 | – | – | – | |